154ಡಿ6 ನಿ=72=(76) 4RR2107

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶಾಂತಾರಾಮ್ ಬುಡ್ನ ಸಿದ್ದಿ ಅವರ ನಿಯಮ 72ರಡಿ ಕೇಳಿರುವ ಗಮನ ಸೆಳೆಯುವ ಸೂಚನಾ ಸಂಖ್ಯೆ 76ಕ್ಕೆ ಉತ್ತರ ಸಲ್ಲಿಸುವ ಕುರಿತು.**

**ಪ್ರಶ್ನೆ: ಬೆಳಗಾವಿ ಜಿಲ್ಲೆ ಖಾನಾಪೂರ ತಾಲ್ಲೂಕಿನಲ್ಲಿ ಸ್ವಾತಂತ್ರ ಪೂರ್ವದಿಂದಲೂ ಅರಣ್ಯ ಪ್ರದೇಶದಲ್ಲಿ ಹೈನುಗಾರಿಕೆ ಉದ್ಯೋಗವನ್ನು ಮಾಡಿಕೊಂಡು ಬಂದಿರುವ ಪಾರಂಪಾರಿಕ ಅರಣ್ಯವಾಸಿಗಳಾದ ಗೌಳಿ ಜನಾಂಗದ 25ಕ್ಕೂ ಹೆಚ್ಚು ಹಳ್ಳಿಗಳಿಗೆ ಮೂಲಭೂತ ಸೌಕರ್ಯಗಳನ್ನು ಪಡೆಯಲು ಅರಣ್ಯ ಇಲಾಖೆಯವರು ಅನುಮತಿ ನೀಡುತ್ತಿಲ್ಲ. ಅನಕ್ಷರಸ್ತರಾದ ಇವರಿಗೆ ಅರಣ್ಯ ಇಲಾಖೆಯ ಪೂರ್ವಾನುಮತಿ ಪಡೆಯುವ ಮಾರ್ಗಸೂಚಿಗಳ ಕುರಿತು ಜ್ಞಾನವಿರುವುದಿಲ್ಲ. ಹೀಗಾಗಿ ಕನಿಷ್ಟ ಮೂಲಭೂತ ಸೌಲಭ್ಯಗಳನ್ನು ಪಡೆಯುವುದಕ್ಕೆ ಅರಣ್ಯ ಇಲಾಖೆಯವರು ಅನುಮತಿ ನೀಡಿ ಸದರಿ ಜನಾಂಗ ಕೂಡ ಎಲ್ಲರಂತೆ ಬದುಕು ನಡೆಸಲು ಅನುಕೂಲ ಮಾಡಿಕೊಡುವಂತೆ ಮಾನ್ಯ ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರ ಗಮನವನ್ನು ಸೆಳೆಯಲು ಬಯಸುತ್ತೇನೆ.**

**ಉತ್ತರ:** ಬೆಳಗಾವಿ ಜಿಲ್ಲೆಯ ಖಾನಾಪೂರ ತಾಲೂಕಿನ ವ್ಯಾಪ್ತಿಯಲ್ಲಿ 34 "ಗೌಳಿವಾಡಾ" ಗಳು ಇರುತ್ತವೆ. ಅವುಗಳಲ್ಲಿ 14 ಗೌಳಿವಾಡಾಗಳು ಅರಣ್ಯ ಪ್ರದೇಶದಲ್ಲಿ ಅನಧಿಕೃತವಾಗಿ ವಾಸವಾಗಿದ್ದು, (ವಿವರ ಅನುಬಂಧ-1 ರಲ್ಲಿ ಲಗತ್ತಿಸಿದೆ). 20 ಗೌಳಿವಾಡಾಗಳು ಅರಣ್ಯೇತರ ಪ್ರದೇಶದಲ್ಲಿ ವಾಸವಾಗಿರುತ್ತವೆ. (ವಿವರ ಅನಬಂಧ-2ರಲ್ಲಿ ಲಗತ್ತಿಸಿದೆ)

ಅರಣ್ಯ ಪ್ರದೇಶದಲ್ಲಿ ವಾಸವಾಗಿರುವ 14 ಅನಧಿಕೃತ ಗೌಳಿವಾಡಾಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ನಿಯಮಗಳಲ್ಲಿ ಅವಕಾಶ ಇರುವುದಿಲ್ಲ.

ಆದರೆ, ಅರಣ್ಯೇತರ ಪ್ರದೇಶದಲ್ಲಿ ವಾಸವಾಗಿರುವ 20 ಗೌಳಿವಾಡಾಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಅರಣ್ಯ ಪ್ರದೇಶದ ಅವಶ್ಯಕತೆ ಇದ್ದಲ್ಲಿ ಅಂದರೆ ಕುಡಿಯುವ ನೀರು ಪೂರೈಕೆ, ವಿದ್ಯುತ್ ಸಂಪರ್ಕ ನೀಡುವುದು, ರಸ್ತೆ ನಿರ್ಮಾಣ ಇತ್ಯಾದಿ ಮೂಲಭೂತ ಸೌಕರ್ಯಗಳಿಗೆ ಸಂಬಂಧಿಸಿದ ಇಲಾಖೆಗಳು ಅಥವಾ ಉಪಯೋಗಿ ಸಂಸ್ಥೆಯವರು ಅರಣ್ಯ ಪ್ರದೇಶವನ್ನು ಅರಣ್ಯೇತರ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಲು ಕೇಂದ್ರ ಸರ್ಕಾರದ ವೆಬ್ ಪೋರ್ಟಲ್ (www.parivesh.nic) ಮೂಲಕ ಪ್ರಸ್ತಾವನೆ ಸಲ್ಲಿಸಿದಲ್ಲಿ ಅರಣ್ಯ ಸಂರಕ್ಷಣಾ -1980 ಕಾಯ್ದೆಯಡಿ ಸರ್ಕಾರದ ಪೂರ್ವಾನುಮತಿ ಪಡೆದುಕೊಳ್ಳುವುದು ಅವಶ್ಯಕವಾಗಿರುತ್ತದೆ.

**ಸಂಖ್ಯೆ: ಎಫ್ಇಇ 324 ಎಫ್ಎಫ್ಎಲ್ 2024**

**(ಈಶ್ವರ ಬಿ ಖಂಡ್ರೆ)**

ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು